ಮೂಲ ದಾವಾ ಸಂಖ್ಯೆ. 82/2015 ಪಿ ಡಬ್ಲ್ಯೂ 3

(ದಿನಾಂಕ 31-08-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಬಿ ವಿ ವಕೀಲರಿಂದಃ-

ನನ್ನ ಸ್ವಂತ ಊರು ಹೆಚ್ ಹಳ್ಳಿಯಾಗಿರುತ್ತದೆ. ನಾನು ಪಿಂಜಾರ್ ಹೆಗ್ಡಾಳ್ ಗ್ರಾಮದ ನಿವಾಸಿಯಾಗಿರುವುದಿಲ್ಲ. ಈ ದಾವೆ ಏನು ವಿಷಯಕ್ಕೆ ಸಂಬಂಧಿಸಿದಂತೆ ನಡೆದಿದೆ ಎನ್ನುವುದು ನನಗೆ ಗೊತ್ತು. ದಾವಾಸ್ತಿ ಸರ್ವೆ ನಂ. 140 ಸ/1 ಇರುತ್ತದೆ. ಈ ಜಮೀನನ್ನು ನಾನು ನೋಡಿದ್ದೇನೆ ನಾನು 30 ವರ್ಷದಿಂದ ಕುರಿ ಕಾಯುತ್ತೇನೆ ಆ ಸಂಬಂಧ ನೋಡಿರುತ್ತೇನೆ. ಪ್ರತಿವಾದಿ ದುರುಗಪ್ಪನ ಜಮೀನನ್ನು ನಾನು ನೋಡಿಲ್ಲ. ವಾದಿ ಜಮೀನನ್ನು ಹೊರತುಪಡಿಸಿ ನಾನು ಚಂದ್ರಶೇಖರ್ ಜಮೀನು, ಫಕೀರಮ್ಮರವರ ಜಮೀನು ಮತ್ತು ಈರಣ್ಣ ಇವರ ಜಮೀನುಗಳನ್ನು ನೋಡಿರುತ್ತೇನೆ. ಈರಣ್ಣನ ಜಮೀನು ವಾದಿಯ ಜಮೀನಿನ ಪೂರ್ವಕ್ಕೆ ಇದೆ. ಚಂದ್ರಶೇಖರ್ ರವರ ಜಮೀನು ವಾದಿಯ ಜುಮೀನಿನ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ಇರುತ್ತವೆ. ಪಶ್ಚಿಮ ದಿಕ್ಕಿಗೆ ಫಕೀರಮ್ಮ ಇವರ ಜಮೀನು ಇದೆ. ದಾವಾ ಜಮೀನು ಮೂಲತಃ ಚಿತ್ರಗಾರ ರಾಮಣ್ಣ ಮತ್ತು ಲಕ್ಷ್ಮಣ ಇವರದು ಇರುತ್ತದೆ. ಆ ಜಮೀನನ್ನು ಅವರು ಪೊಲೀಸ್ ಭೀಮಣ್ಣ ಇವರಿಂದ ಖರೀದಿ ಮಾಡಿದ್ದಾರೆ. ಈ ವಿಚಾರವನ್ನು ನಿಮಗೆ ಯಾರು ತಿಳಿಸಿದರೆಂದರೆ ನಾವು ಅಲ್ಲಿ ಕುರಿ ಕಾಯುವುದಕ್ಕೆ ಹೋಗುತ್ತೇವೆ ಆಗ ವಿಚಾರ ಗೊತ್ತಾಯಿತು ಅದನ್ನು ಯಾರು ಹೇಳಿದರೆಂದು ನನಗೆ ಗೊತ್ತಿಲ್ಲ. ದಾವಾಸ್ತಿ ಪ್ರತಿವಾದಿ ದುರುಗಪ್ಪ ಇವರಿಗೆ ಸೇರಿದ ಸ್ವತ್ತು ಅವನೇ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸುಮಾರು 30 ವರ್ಷದಿಂದ ವಾದಿಯೇ ಸ್ವಾಧೀನದಲ್ಲಿರುತ್ತಾರೆ.

ದಾವಾ ಜಮೀನು ಒಟ್ಟು ಅಂದಾಜು 4 ಎಕರೆ ಇರಬಹುದು. ಪಟ್ಟಾದಲ್ಲಿ 3 ಎಕರೆ 25 ಸೆಂಟ್ಸ ಇರುತ್ತದೆ. ಯಾವ ದಾಖಲೆ ನೋಡಿ 3 ಎಕರೆ 25 ಸೆಂಟ್ಸ ಜಮೀನು ಪಟ್ಟಾದಲ್ಲಿದೆ ಅಂತಾ ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಸರ್ವೆ ಮಾಡಿದ ಸಮಯದಲ್ಲಿ ನೋಡಿದೆ ಎನ್ನುತ್ತಾರೆ. ಸರ್ವೆ ಯಾವಾಗ ಮಾಡಿದರೆಂದರೆ ಸಾಕ್ಷಿಯು 10-15 ವರ್ಷದ ಹಿಂದೆ ಮಾಡಿರಬಹುದು. ಸರ್ವೆಯಾರು ಮಾಡಿದರೆಂದು ನನಗೆ ಗೊತ್ತಿಲ್ಲ. ಸರ್ವೆ ಸಮಯದಲ್ಲಿ ಲಕ್ಷ್ಮಣ, ರಾಮಣ್ಣ ಎಂದರೆ ವಾದಿಯರ ತಂದೆ ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು ಭೀಮಣ್ಣ ಇವರಿಂದ ಮಾಡಿಕೊಂಡ ಖರೀದಿ ಪತ್ರ ನೋಡಿರುತ್ತೇನೆ ಅದರಲ್ಲಿ ಮೊದಲಿಗೆ 4 ಎಕರೆ ಅಂತಾ ಇತ್ತು. ನಾನು ಯಾವತ್ತೂ ದಾವಾ ಜಮೀನಿಗೆ ಹೋಗಿಲ್ಲ, ಅಲ್ಲಿ ಕುರಿಗಳನ್ನು

ನಿಲ್ಲಿಸಿರುವುದಿಲ್ಲ, ದಾವಾ ಜಮೀನಿನ ಅಕ್ಕಪಕ್ಕ ಯಾರ ಜಮೀನಿದೆ ಎನ್ನುವುದು ನನಗೆ ಗೊತ್ತಿಲ್ಲವೆಂದರೆ ಸರಿಯಲ್ಲ. ಹೆಚ್ ಬಿ ಹಳ್ಳಿಯಿಂದ ಪಿಂಜಾರ್ ಹೆಗ್ಡಾಳ್ ಗ್ರಾಮ 10 ಕಿ ಮಿ ಅಂತರದಲ್ಲಿದೆ. ದಾವಾಸ್ತಿ ಪ್ರತಿವಾದಿಯರ ಪೂರ್ವಜರ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಇವತ್ತಿಗೂ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ವಾದಿಯ ಮನೆ ನಮ್ಮ ಮನೆ ಹತ್ತಿರ ಇದೆ. ನನಗೆ ಅವರು ಆತ್ಮೀಯರು ಎಂದರೆ ಸರಿಯಲ್ಲ. ನನಗೆ ಸಾಕ್ಷಿ ನುಡಿಯಲು ವಾದಿಯು ಕರೆತಂದಿದ್ದರು. ವಾದಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ